**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಮುಂಡಗೋಡ.**

ಸಿಸಿ ನಂಃ 174/2018
ಸಿ ಡಬ್ಲುಃ 08
ಪಿ ಡಬ್ಲುಃ 05.

| | |
|---|---|
| ಸಾಕ್ಷಿದಾರರ ಹೆಸರು | ರಾಜಪ್ಪ ದೊಡಮನಿ |
| ತಂದೆಯ ಹೆಸರು | ಕನಕಪ್ಪ |
| ವಯಸ್ಸು | 45 ವರ್ಷ |
| ಉದ್ಯೋಗ | ಎ. ಎಸ್. ಐ ರಾಮನಗರ ಪೋಲಿಸ್ ಠಾಣೆ |
| ವಾಸ್ತವ್ಯ | ರಾಮನಗರ |

ಸಾಕ್ಷಿಯನ್ನು ದಿನಾಂಕ **13.03.2026.** ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ನಾನು 2017 ರಿಂದ 2019 ರವರೆಗೆ ಮುಂಡಗೋಡ ಪೋಲಿಸ್ ಠಾಣೆಯಲ್ಲಿ ಸಿ.ಹೆಚ್.ಸಿ-1195 ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 27.01.2018 ರಂದು ನಾನು ಠಾಣಾಧಿಕಾರಿ ಕರ್ತವ್ಯದಲ್ಲಿದ್ದಾಗ ಚಾಸಾ 1 ರವರು 16.15 ಗಂಟೆಗೆ ಠಾಣೆಗ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ, ಠಾಣಾ ಗುನ್ನಾ ಸಂಖ್ಯೆ 19/2018 ರಲ್ಲಿ ದೂರನ್ನು ಭಾ.ದಂ.ಸಂ.ಕಲಂ 279, 337 ಮತ್ತು 338 ನೇದಕ್ಕೆ ದಾಖಲಿಸಿಕೊಂಡು, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಅದರ ಪ್ರತಿಯನ್ನು ನಮ್ಮ ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡೆನು. ಅದೇ ದಿನ ಘಟನಾ ಸ್ಥಳದ ಪಂಚನಾಮೆಯನ್ನು ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ 17.00 ಗಂಟೆಯಿಂದ 18.00 ಗಂಟೆಯವರೆಗೆ ಚಾಸಾ 2 ಮತ್ತು 3 ರವರ ಸಮಕ್ಷಮ ಜರುಗಿಸಿ, ಕಚ್ಚಾ ನಕಾಶೆಯನ್ನೂ ಸಹ ತಯಾರಿಸಿರುತ್ತೇನೆ.

ದಿನಾಂಕಃ 28.01.2018 ರಂದು ಅಪಘಾತಪಡಿಸಿದ ಮತ್ತು ಅಪಘಾತಕೊಳಗಾದ ವಾಹನಗಳ ಮಾಲೀಕತ್ವದ ಕುರಿತು, ಮಾಹಿತಿಯನ್ನು ಒದಗಿಸುವಂತೆ ಕೋರಿ, ಶಿರಸಿಯ ಆರ್.ಟಿ.ಓ ಕಚೇರಿಗೆ ನಿವೇದಿಸಿಕೊಂಡಿರುತ್ತೇನೆ.

ದಿನಾಂಕಃ 29.02.2018 ರಂದು ಆರ್.ಟಿ.ಓ ಕಚೇರಿಯಿಂದ ಬಿ ಎಕ್ಸಟ್ರಾಕ್ಟ ವರದಿಯನ್ನು ಸ್ವೀಕರಿಸಿರುತ್ತೇನೆ.

ದಿನಾಂಕಃ 12.03.2018 ರಂದು ಹುಬ್ಬಳ್ಳಿ ಕೀಮ್ಸ ಆಸ್ಪತ್ರೆಯಿಂದ ಗಾಯಾಳುವಿನ ಗಾಯದ ಪ್ರಮಾಣ ಪತ್ರವನ್ನು ತೆಗೆದುಕೊಂಡು ಬರುವಂತೆ ನಮ್ಮ ಠಾಣಾ ಸಿಬ್ಬಂದಿಯವರನ್ನು ನಿಯೋಜನೆಗೊಳಿಸಿದ್ದು, ಆದರೆ ದಾಖಲಾತಿ ಇನ್ನೂ ತಯಾರಾಗಿರದೇ ಇದ್ದ ಕಾರಣ, ದಾಖಲಾತಿ ಸಿಕ್ಕಿರುವುದಿಲ್ಲ.

ದಿನಾಂಕಃ 22.03.2018 ರಂದು ಚಾಸಾ 4 ಮತ್ತು 5 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ.

ಅಪಘಾತಪಡಿಸಿದ ವಾಹನದ ಆರ್.ಸಿ ಮಾಲೀಕರು ವಾಹನವನ್ನು ಬಿಡಿಸಿಕೊಂಡು ಹೋಗದೇ ಇದ್ದ ಕಾರಣ, ದಿನಾಂಕಃ 24.04.2018 ರಂದು ಸದರಿ ವಾಹನಕ್ಕೆ ಸಂಬಂಧಿಸಿದಂತೆ ನಾನು ಸ್ವತ್ತುಪಟ್ಟಿ ಸಂಖ್ಯೆ 38/2018 ನ್ನು ತಯಾರಿಸಿ, ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದಿನಾಂಕಃ 02.06.2018 ರಂದು ಅಪಘಾತಪಡಿಸಿದ ವಾಹನದ ಮಾಲೀಕರಿಗೆ ಮೋಟರ ವಾಹನ ಕಾಯ್ದೆ ಕಲಂ 133 ರಡಿಯಲ್ಲಿ ನೋಟಿಸ್ಸನ್ನು ಜಾರಿ ಮಾಡಿ, ಅದೇ ದಿನ ಅವರಿಂದ ಉತ್ತರ ಪಡೆದುಕೊಂಡಿರುತ್ತೇನೆ . ಸದರಿಯವನು ತನ್ನ ಉತ್ತರದಲ್ಲಿ, ಸದರಿ ದಿನದಂದು 1 ನೇ ಆರೋಪಿ ವಾಹನವನ್ನು ಚಲಾಯಿಸುತ್ತಿದ್ದನ್ನು ಮತ್ತು 1 ನೇ ಆರೋಪಿಯ ಬಳಿ ವಾಹನ ಚಾಲನಾ ಪರವಾನಿಗೆ ಇರಲಿಲ್ಲ ಎಂದು ಉತ್ತರ ನೀಡಿರುತ್ತಾನೆ.

ದಿನಾಂಕಃ 25.06.2018 ರಂದು ಗಾಯಾಳುವಿನ ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿರುತ್ತೇನೆ. ಆರೋಪಿಯ ವಿರುದ್ಧ ಸಾಕಷ್ಟು ಸಾಕ್ಷ್ಯಧಾರಗಳು ಕಂಡು ಬಂದ ಕಾರಣ, ಅದೇ ದಿನ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**2 ನೇ ಆರೋಪಿಯನ್ನು ನೋಡಿದರೆ ಗುರುತಿಸಬಹುದು. ಈ ದಿನ 2 ನೇ ಆರೋಪಿ ನ್ಯಾಯಾಲಯಕ್ಕೆ ಗೈರು ಹಾಜರಿದ್ದು, ಆರೋಪಿಯ ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರ ತಕರಾರು ಇರುವುದಿಲ್ಲ.**

ನ್ಯಾಯಾಲಯದ ಮುಂದಿರುವ ನಿಪಿ.1 ನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸುತ್ತೇನೆ, ನನ್ನ ಸಹಿಯನ್ನು **ನಿಪಿ.1 ಬಿ** ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು ಅದನ್ನು ಗುರುತಿಸುತ್ತೇನೆ, ಅದನ್ನು **ನಿಪಿ. 6** ಎಂದು, ಹಾಗೂ ಅದರಲ್ಲಿರುವ ಸಹಿ ನನ್ನದೇ ಆಗಿದ್ದು, ನನ್ನ ಸಹಿಯನ್ನು **ನಿಪಿ. 6 ಎ** ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ ನಿಪಿ.2 ಮತ್ತು ನಿಪಿ.3 ನ್ನು ಮತ್ತು ಅವುಗಳಲ್ಲಿರುವ ನನ್ನ ಸಹಿಗಳನ್ನು ನೋಡಿ ಗುರುತಿಸುತ್ತೇನೆ, ನನ್ನ ಸಹಿಗಳನ್ನು ಅನುಕ್ರಮವಾಗಿ **ನಿಪಿ.2 ಡಿ ಮತ್ತು ನಿಪಿ.3 ಡಿ** ಎಂದು ಗುರುತಿಸಲಾಯಿತು.

2 ನೇ ಆರೋಪಿಗೆ ನೀಡಿದ ನೋಟಿಸ್ಸನ್ನು ನೋಡುತ್ತಿದ್ದು ಅದನ್ನು ಗುರುತಿಸುತ್ತೇನೆ, ಅದನ್ನು **ನಿಪಿ.** 7 ಎಂದು, ಹಾಗೂ ಅದರಲ್ಲಿರುವ ಸಹಿ ನನ್ನದೇ ಆಗಿದ್ದು, ನನ್ನ ಸಹಿಯನ್ನು **ನಿಪಿ.7 ಎ** ಎಂದು ಗುರುತಿಸಲಾಯಿತು.

2 ನೇ ಆರೋಪಿಯಿಂದ ಪಡೆದುಕೊಂಡ ಉತ್ತರವನ್ನು ನೋಡುತ್ತಿದ್ದು ಅದನ್ನು ಗುರುತಿಸುತ್ತೇನೆ, ಅದನ್ನು **ನಿಪಿ. 8** ಎಂದು, ಹಾಗೂ ಅದರಲ್ಲಿರುವ ಸಹಿ ನನ್ನದೇ ಆಗಿದ್ದು, ನನ್ನ ಸಹಿಯನ್ನು **ನಿಪಿ.8 ಎ** ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ ಎಂ.ವಿ ರಿಪೋರ್ಟನ್ನು ನೋಡುತ್ತಿದ್ದು ಅದನ್ನು ಗುರುತಿಸುತ್ತೇನೆ, ಅದನ್ನು **ನಿಪಿ. 9** ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ ಗಾಯದ ಪ್ರಮಾಣ ಪತ್ರಗಳನ್ನು ನೋಡುತ್ತಿದ್ದು ಅವುಗಳನ್ನು ಗುರುತಿಸುತ್ತೇನೆ, ಅವುಗಳನ್ನು ಅನುಕ್ರಮವಾಗಿ **ನಿಪಿ. 10 ಮತ್ತು ನಿಪಿ.11** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಂ.ಬಿ.ವಾಯ್ ಆರೋಪಿತರ ಪರ ವಕೀಲರಿಂದಃ**

ಈ ಪ್ರಕರಣಕ್ಕೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರು ನೀಡಿದ ಸುಳ್ಳು ದೂರಿಗೆ ಪೂರಕವಾಗಿ ಈ ಆರೋಪಿಯ ವಿರುದ್ಧ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಅಪಘಾತವಾದ ಸ್ಥಳಕ್ಕೆ ಹೋಗಿದ್ದು ಇರುವುದಿಲ್ಲ ಮತ್ತು ಪಂಚನಾಮೆಯನ್ನು ಜರುಗಿಸಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಗಾಯದ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲಾ ದಾಖಲಾತಿಗಳನ್ನು ನಾನು ಠಾಣೆಯಲ್ಲಿಯೇ ಕುಳಿತು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

**ಪ್ರ ದ ನ್ಯಾದಂ ಮುಂಡಗೋಡ.**